**ದಿನಾಂಕಃ 14-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಎಸ್. ಆರ್. ಹೆಚ್ ಮಾನ್ಯ ವಕೀಲರಿಂದ, 2 ನೇ ಪ್ರತಿವಾದಿಯ ಪರವಾಗಿ:**

ನನ್ನ ಮುಖ್ಯ ವಿಚಾರಣೆಗಾಗಿ ಹಾಜರುಪಡಿಸಿರುವಂತಹ ಪ್ರಮಾಣ ಪತ್ರದಲ್ಲಿ ಬರೆಯಲಾಗಿರುವ ಅಂಶಗಳು ನನಗೆ ತಿಳಿದಿದ್ದು ಸತ್ಯಾಂಶದಿಂದ ಕೂಡಿರುತ್ತದೆ.

ಒಟ್ಟು 5 ತೆರಿಗೆ ಪಾವತಿ ರಸೀದಿಗಳನ್ನು ಕ್ರಮವಾಗಿ ನಿಡಿ-1 ರಿಂದ ನಿಡಿ-5, ಕೈಬರಹ "ಡ" ದ ದೃಢೀಕೃತ ನಕಲನ್ನು ನಿಡಿ-6 (6 ಪುಟಗಳು), ಸರ್ವೆ ನಂ.62 ರ ದೃಢೀಕೃತ ನಕಲನ್ನು ನಿಡಿ-7, ಸರ್ವೆ ನಂ.60/1 ಬಿ, ಇದರ ದೃಢೀಕೃತ ನಕಲನ್ನು ನಿಡಿ-8, ಸರ್ವೆ ನಂ.60/1 ರ ದೃಢೀಕೃತ ನಕಲನ್ನು ನಿಡಿ-9, ಸರ್ವೆ ನಂ.61/2 ರ ಆರ್.ಟಿ.ಸಿಯ ದೃಢೀಕೃತ ನಕಲನ್ನು ನಿಡಿ-10, ಸರ್ವೆ ನಂ.62/3 ಎ/1/2 ಇದರ ಆರ್.ಟಿ.ಸಿಯ ದೃಢೀಕೃತ ನಕಲನ್ನು ನಿಡಿ-11, ಸರ್ವೆ ನಂ.60/1 ಬಿ, ಇದರ ಆರ್.ಟಿ.ಸಿಯ ದೃಢೀಕೃತ ನಕಲನ್ನು ನಿಡಿ-12, ಸರ್ವೆ ನಂ.60/1 ಬಿ, ಇದರ ಆರ್.ಟಿ.ಸಿಯ ದೃಢೀಕೃತ ನಕಲನ್ನು ನಿಡಿ-13, ಸರ್ವೆ ನಂ.61/2 ಇದರ ಆರ್.ಟಿ.ಸಿಯ ದೃಢೀಕೃತ ನಕಲನ್ನು ನಿಡಿ-14, ಸರ್ವೆ ನಂ.62/3 ಎ/1/2 ಇದರ ಆರ್.ಟಿ.ಸಿಯ ದೃಢೀಕೃತ ನಕಲನ್ನು ನಿಡಿ-15, ಸರ್ವೆ ನಂ.60/1 ಬಿ ಇದರ ಆರ್.ಟಿ.ಸಿಯ ದೃಢೀಕೃತ ನಕಲನ್ನು ನಿಡಿ-16, ಸರ್ವೆ ನಂ.61/2 ಇದರ ಆರ್.ಟಿ.ಸಿಯ ದೃಢೀಕೃತ ನಕಲನ್ನು ನಿಡಿ-17, ಸರ್ವೆ ನಂ.62/3 ಎ/1/2 ಇದರ

ಆರ್.ಟಿ.ಸಿಯ ದೃಢೀಕೃತ ನಕಲನ್ನು ನಿಡಿ-18, ಸರ್ವೆ ನಂ.62/33/1/2 ಇದರ ಆರ್.ಟಿ.ಸಿಯ ದೃಢೀಕೃತ ನಕಲನ್ನು ನಿಡಿ-19, ಸರ್ವೆ ನಂ.62/1ರ ಇದರ ಆರ್.ಟಿ.ಸಿ ಯ ದೃಢೀಕೃತ ನಕಲನ್ನು ನಿಡಿ-20, ಸರ್ವೆ ನಂ.60/1ಬಿ ಇದರ ಆರ್.ಟಿ.ಸಿಯ ದೃಢೀಕೃತ ನಕಲನ್ನು ನಿಡಿ-21, ಸರ್ವೆ ನಂ.61/2ರ ಆರ್.ಟಿ.ಸಿಯ ದೃಢೀಕೃತ ನಕಲನ್ನು ನಿಡಿ-22, ವಿಶೇಷ ಭೂ-ಸ್ವಾಧೀನಾಧಿಕಾರಿಗಳು, ಕೃ.ಮೇ.ಯೋಜನೆ ಇವರು ಕೊಟ್ಟಿರುವ ನೋಟಿಸ್ಸುಗಳ ಪ್ರತಿಗಳನ್ನು ನಿಡಿ-23 ಮತ್ತು ನಿಡಿ-24, ಸರ್ವೆ ನಂ.60/1ಬಿ ಇದರ ಆರ್.ಟಿ.ಸಿಯನ್ನು ನಿಡಿ-25, ಸರ್ವೆ ನಂ.61/ಬಿ ಇದರ ಆರ್.ಟಿ.ಸಿಯನ್ನು ನಿಡಿ-26, ಸರ್ವೆ ನಂ.62/3ಎ/1/2 ಇದರ ಆರ್.ಟಿ.ಸಿಯನ್ನು ನಿಡಿ-27 ಎಂದು ಗುರುತಿಸಲಾದವು.

**ಪಾಟೀ ಸವಾಲು: ಶ್ರೀ. ಆರ್. ವ್ಹಿ. ಕೆ ಮಾನ್ಯ ವಕೀಲರಿಂದ, ವಾದಿಗಳ ಪರವಾಗಿ:**

ನನ್ನ ತಂದೆಯವರು ತೀರಿಕೊಂಡಿರುತ್ತಾರೆ. ದಾವಾ ಸ್ವತ್ತುಗಳು ನನ್ನ ತಂದೆಯವರ ಸ್ವತ್ತುಗಳಾಗಿರುತ್ತವೆ. ಸನ್ 2018ರಲ್ಲಿ ನನ್ನ ತಂದೆಯವರು ತೀರಿಕೊಂಡಿರುತ್ತಾರೆ. ನಮ್ಮ ತಂದೆಗೆ ವಾದಿಗಳು ಹಾಗೂ 1ಮತ್ತು 2ನೇ ಪ್ರತಿವಾದಿಗಳು ಮಾತ್ರ ವಾರಸುದಾರರು ಎಂದರೆ ಸರಿ ನಮ್ಮ ವಾದಿಗಳು ಹಾಗೂ 1ಮತ್ತು 2ನೇ ಪ್ರತಿವಾದಿಗಳು ನಡುವೆ ದಾವಾ ಸ್ವತ್ತುಗಳಲ್ಲಿ ಇಲ್ಲಿಯವರೆಗೆ ಪಾಲು ವಾಟ್ನಿಯಾಗಿರುವುದಿಲ್ಲ. ವಾದಿಗಳಿಗೆ ದಾವಾ ಸ್ವತ್ತುಗಳಲ್ಲಿ ಹಿಸ್ಸೆಯನ್ನು ಕೊಡಲು

ನನಗೆ ಯಾವುದೇ ತಕರಾರು ಇರುವುದಿಲ್ಲ. ನಿಡಿ-25 ರಿಂದ ನಿಡಿ-27 ನನ್ನ ತಂದೆಯವರ ಹೆಸರಿನಲ್ಲಿರುತ್ತವೆ ಎಂದರೆ ಸರಿ. ಅವುಗಳು ಸನ್ 2001 ಕ್ಕಾದಂತೆ ಇರುತ್ತವೆ ಎಂದರೆ ಸರಿ. ನಮ್ಮ ತಂದೆಯವರು ತೀರಿಕೊಂಡ ನಂತರ ವಾದಿಗಳು ಹಾಗೂ 1 ಮತ್ತು 2 ನೇ ಪ್ರತಿವಾದಿಗಳು ಉತಾರಗಳಲ್ಲಿ ನಮ್ಮ ಹೆಸರುಗಳನ್ನು ವಾರಸಾ ಪ್ರಕಾರ ಹಚ್ಚಿಕೊಂಡಿರುತ್ತೇವೆ ಎಂದರೆ ಸರಿ. 7 ರಿಂದ 14 ನೇ ಪ್ರತಿವಾದಿಗಳು ನಮ್ಮ ಕುಟುಂಬಕ್ಕೆ ಯಾವುದೇ ರೀತಿಯಿಂದ ಸಂಬಂಧವಿರುವುದಿಲ್ಲ. ನಮ್ಮ ತಂದೆಯವರು ತಮ್ಮ ಜೀವಿತಾ ಕಾಲಾವಧಿಯಲ್ಲಿ ನಿಪಿ-8 ರ ಪ್ರಕಾರ ಪ್ರತಿವಾದಿ ನಂ.7 ರಿಂದ 14 ರವರ ವಿರುದ್ಧ ರಿವಿಜನ್ ಸಲ್ಲಿಸಿದ್ದರು ಎಂದರೆ ಸರಿ. ಸದರಿ ರಿವಿಜನದಲ್ಲಿ ಅಕ್ರಮವಾಗಿ ಹೆಸರು ಸೇರಿಕೊಂಡಿರುವುದಕ್ಕೆ "ಡ" ನಂಬರ್ 3787 ರದ್ದಾಗಿರುತ್ತದೆ. ಜಿಲ್ಲಾಧಿಕಾರಿಗಳು ಸದರಿ "ಡ" ನ್ನು ರದ್ದುಪಡಿಸಿ ತಹಶೀಲ್ದಾರ ಬೀಳಗಿ ರವರಿಗೆ ಮರು ವಿಚಾರಣೆ ಕಳುಹಿಸಿದ್ದು, ಆದರೆ ಸದರಿ ಅದಿಕಾರಿಗಳು ಯಾವುದೇ ಮರುವಿಚಾರಣೆ ಮಾಡಿರುವುದಿಲ್ಲ. ನಿಪಿ-12 ರ ಪ್ರಕಾರ ತಹಶೀಲ್ದಾರ ಬೀಳಗಿ ಇವರು ದಿವಾಣಿ ನ್ಯಾಯಾಲಯಕ್ಕೆ ಹೊಗಿ ಪ್ರಕರಣವನ್ನು ಸಲ್ಲಿಸಲು ಆದೇಶ ಮಾಡಿರುತ್ತಾರೆ. ಸದರಿ ಆದೇಶವನ್ನು ದಿನಾಂಕ 05-05-2022 ರಂದು ಮಾಡಲಾಗಿರುತ್ತದೆ.

**ಪಾಟೀ ಸವಾಲು: ಮಾನ್ಯ ಡಿ.ಜಿ.ಪಿ ವಕೀಲರಿಂದ, 2 ರಿಂದ 6 ನೇ ಪ್ರತಿವಾದಿಗಳ ಪರವಾಗಿ:**

2 ರಿಂದ 5 ನೇ ವಾದಿಗಳು ನನ್ನ ಸಹೋದರಿಯರು. ಸಾಕ್ಷಿಗೆ ಈಗ ನೀವು ಹಾಗೂ ನಿಮ್ಮ ಅಕ್ಕ ತಂಗಿಯವರು ದಾವಾ ಸ್ವತ್ತುಗಳಲ್ಲಿ ಹಕ್ಕು ಬೇಕು ಎಂದು ಸಲ್ಲಿಸಿರುತ್ತೀರಿ ಎಂದು ಹೇಳಿದಕ್ಕೆ ಸಾಕ್ಷಿ ಪ್ರಸ್ತುತ ದಾವೆಯನ್ನು ತಮ್ಮ ಅಕ್ಕ ತಂಗಿಯರು ಸಲ್ಲಿಸಿರುವುದಾಗಿ ಹೇಳುತ್ತಾರೆ. "ಡ" ನಂ.3087 ರ ಪ್ರಕಾರ ಹೆಸರುಗಳು ಸರಿಯಾಗಿ ನಮೂದಾಗಿರುತ್ತವೆ ಎಂದು ಹೇಳಿದಕ್ಕೆ ಸಾಕ್ಷಿ ಅಕ್ರಮವಾಗಿ ನಮೂದಾಗಿರುತ್ತವೆ ಎಂದು ಹೇಳುತ್ತಾರೆ. ಸದರಿ ಆದೇಶದ ವಿರುದ್ಧ ನಮ್ಮ ತಂದೆಯವರು ಮೇಲ್ಮನವಿ ಸಲ್ಲಿಸಿದ್ದು, ಎ.ಸಿ. ಜಮಖಂಡಿಯವರು ಸದರಿ ಮೇಲ್ಮನವಿಯನ್ನು ವಜಾಮಾಡಿರುತ್ತಾರೆ. ಸದರಿ ಮೇಲ್ಮನವಿಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಸದರಿ ಮೇಲ್ಮನವಿಯ ಆದೇಶದ ವಿರುದ್ಧ ನಮ್ಮ ತಂದೆಯವರು ಜಿಲ್ಲಾಧಿಕಾರಿಗಳ ಸಮಕ್ಷಮ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಜಿಲ್ಲಾಧಿಕಾರಿಗಳು ಸದರಿ ಮೇಲ್ಮನವಿಯಲ್ಲಿ ನ್ಯಾಯಬದ್ಧವಾಗಿ ಆದೇಶವನ್ನು ಮಾಡಿರುತ್ತಾರೆ ಎಂದರೆ ಸರಿ. ಜಿಲ್ಲಾಧಿಕಾರಿಯವರು ಡ-ನಂ.3087 ಇದನ್ನು ರದ್ದುಮಾಡಬೇಕೆಂದು ಆದೇಶ ಮಾಡಿರುತ್ತಾರೆ. ಪಾಲು ವಾಟ್ನಿ ಕೇಳಿ ವಾದಿಗಳು ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾರೆ. ಜಿಲ್ಲಾಧಿಕಾರಿಗಳು ಬೀಳಗಿ ತಹಶೀಲ್ದಾರವರಿಗೆ ಪ್ರಕರಣದಲ್ಲಿ ಮರು ವಿಚಾರಣೆ ಮಾಡಲು ಹೇಳಿದ್ದರೂ ಕೂಡಾ ಸದರಿ ಅಧಿಕಾರಿಗಳು ಅದನ್ನು ಪಾಲನೆ ಮಾಡಿರುವುದಿಲ್ಲ. ದಾವಾ ಸ್ವತ್ತುಗಳು ಬೀಳಗಿಯಲ್ಲಿರುವುದರಿಂದ ಈ ನ್ಯಾಯಾಲಯದಲ್ಲಿ ವ್ಯಾಪ್ತಿಯಲ್ಲಿ ಪ್ರಕರಣ ನಡೆಸಲು ಬರುವುದಿಲ್ಲವೆಂದು ಹೇಳಿದಕ್ಕೆ

ಸಾಕ್ಷಿ ಒಂದು ಸ್ವತ್ತು ಮಲ್ಲಾಪುರ ಗ್ರಾಮದಲ್ಲಿರುವುದಾಗಿ ಹೇಳುತ್ತಾರೆ. ತಹಶೀಲ್ದಾರವರು ಮರು ವಿಚಾರಣೆಯನ್ನು ಮಾಡಿ ಕಾನೂನುಬದ್ಧವಾಗಿ ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಅದೆ.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆಎಂಎಫ್‌ಸಿ, ಬಾಗಲಕೋಟೆ.